

# ಕಿವುಡು-ಮೂಕತನಕ್ಕೆ ಸವಾಲೆಸೆದವರ ಸಾಹಸ ಕಥನಗಳು

ಅಂಗವೈಕಲ್ಯದೊಂದಿಗೆ ಜನಿಸುವ ಮಕ್ಕಳನ್ನು 'ಹಣೆಬರಹ' ಎಂದು ಸ್ವೀಕರಿಸುವ ಮನಸ್ಥಿತಿ ನಮ್ಮಲ್ಲಿದೆ. ಆದರೆ, ಕೆಲವಷ್ಟೇ ಪೋಷಕರು ತಮ್ಮ ಮಕ್ಕಳ ಹಣೆಬರಹವನ್ನು ತಾವೇ ಬರೆಯುವ ಸವಾಲು ಸ್ವೀಕರಿಸುತ್ತಾರೆ. ಸತತ ಪರಿಶ್ರಮ ಮತ್ತು ಸೂಕ್ತ ವೈದ್ಯಕೀಯ ಚಿಕಿತ್ಸೆಯ ಮೂಲಕ ಮಕ್ಕಳಲ್ಲಿನ ದೈಹಿಕ ಕೊರತೆಯನ್ನು ತಿದ್ದಿ ಸರಿಪಡಿಸಲು ಪ್ರಯತ್ನಿಸುತ್ತಾರೆ. ಕಿವುಡು ಮತ್ತು ಮೂಕರಾಗಿ ಜನಿಸಿದ ಮಕ್ಕಳು ತಮ್ಮ ಕೊರತೆಯನ್ನು ಮೀರಿ ನಿಂತ ನಿಜಜೀವನದ ಕಥನಗಳ ಈ ಬರಹ, ಅಂಗವಿಕಲರ ಬಗ್ಗೆ ನಮ್ಮಲ್ಲಿರುವ ಪೂರ್ವಗ್ರಹಗಳನ್ನು ಬದಲಿಸುವಂತಿದೆ ಹಾಗೂ ಅಂಥ ಮಕ್ಕಳ ಪೋಷಕರಿಗೆ ಹೊಸ ದಿಕ್ಕಿನಲ್ಲಿ ನಡೆಯಲು ಪ್ರೇರಣೆ ನೀಡುವಂತಿದೆ. ವ್ಯಾಕ್ಸೀನ್ ಕುರಿತ ಮಾತುಕತೆ ಎಲ್ಲೆಡೆ ಚಾಲ್ತಿಯಲ್ಲಿರುವ ಸಂದರ್ಭದಲ್ಲಿ, ಅಂಗವಿಕಲರ ಕುರಿತಂತೆ ಇರುವ ಮೂಢನಂಬಿಕೆಗಳ ಕುರಿತಂತೆ ಅಗತ್ಯವಾದ 'ತಿಳಿವಳಿಕೆಯ ಲಸಿಕೆ'ಯ ರೂಪದಲ್ಲಿ ಈ ಬರಹವನ್ನು 'ಸುಧಾ' ನಿಮ್ಮ ಮುಂದಿಡುತ್ತಿದೆ.